ಹೊಡೆಯುತ್ತಾರಲ್ಲಾ ಅದಕ್ಕೆ ಅವಕಾಶವನ್ನು ಮಾಡಿ ಕೊಡಬಾರದು ದಯವಿಟ್ಟು ಆ ಕ್ರಮವನ್ನು ತಾವು ಕೈಗೊಳ್ಳುತ್ತೀರಾ?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅಧ್ಯಕ್ಷರೆ, ಅವರು ಏನು ಜಿಂದಾಲ್ ಕಂಪನಿಯ ಬಗ್ಗೆ ಹೇಳಿದ್ದಾರೆ ಸುಮಾರು 180 ಕೋಟಿ ರೂ ಗಳ ಹಣವನ್ನು ಪರಿಸ್ಕೃತ ದರದಲ್ಲಿ ಅವರಿಗೆ ಕಟ್ಟುವುದಕ್ಕೆ ನಾವು ಏನು ನೋಟೀಸ್ ಕೊಟ್ಟಿದ್ದೇವೆ, ಅದಕ್ಕೆ ಅವರು ಈಗಾಗಲೇ 6 ಕೋಟಿ ರೂ ಗಳ ಹಣವನ್ನು ಕಟ್ಟಿದ್ದಾರೆ ನಾವು ಅವರ ಟೀ, ಕಾಫಿಯ ಆತಿಥ್ಯಕ್ಕೆ ಒಳಗಾಗಿ ಸರ್ಕಾರಕ್ಕೆ ಬರತಕ್ಕಂಥ ಹಣವನ್ನು ಸಂಗ್ರಹ ಮಾಡುವುದರಲ್ಲಿ ಇವತ್ತು ಎಡವಿಲ್ಲ

ಶ್ರೀ ಡಿ ಆರ್ ಪಾಟೀಲ್. ಅವರ ಆತಿಥ್ಯವನ್ನು ಸ್ವೀಕಾರ ಮಾಡುವುದಿಲ್ಲವೆಂದು ಹೇಳುವುದಕ್ಕೆ ಏನು ತೊಂದರೆ ಇದೆ

ಅಧ್ಯಕ್ಷರು. ಮಾನ್ಯ ಪಾಟೀಲ್‌ರೆ, ನಿಮ್ಮದು ಬಹಳ ಜಾಸ್ತಿಯಾಯಿತು

ಪ್ರವಾಸೋದ್ಯಮ ಅಭಿವೃದ್ಧಿಗೆ ಅನುದಾನ ಬಿಡುಗಡೆ

160(1027) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ತೆಗೆದಕೊಂಡಿರುವ ಕ್ರಮಗಳೇನು,

ಆ) ಈ ಕಾರ್ಯಕ್ಕಾಗಿ ಸರ್ಕಾರ ಒದಗಿಸಿರುವ ಅನುದಾನವೆಷ್ಟು,

ಇ) ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಲಾಗಿದೆಯೇ,

ಈ) ಚಿಕ್ಕಮಗಳೂರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಸಲ್ಲಿಸಿರುವ ವರದಿಗೆ ಸರ್ಕಾರದ ಕ್ರಮವೇನು?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರುರವರು ದಿನಾಂಕ 27–3–2003 ರಂದು ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ 100 ಕೋಟಿ ರೂ ಗಳ ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆ ಜಿಲ್ಲಾಧಿಕಾರಿಗಳು, ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಗಣಿಸಿ ಸದರಿ

ಜಿಲ್ಲೆಯಲ್ಲಿನ ಪ್ರವಾಸಿ ಸ್ಥಳಗಳ ಅಭಿವೃದ್ಧಿಯನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿ ಸರ್ಕಾರವು ತನ್ನ ಆದೇಶ ಸಂಖ್ಯೆ, ವಾಪ್ರಯು 41 ಪ್ರವಾಯೋ 2003, ದಿನಾಂಕ 31–3–2003ರಲ್ಲಿ 30 00 ಲಕ್ಷ ರೂ ಗಳನ್ನು ಬಿಡುಗಡೆ ಮಾಡಿರುತ್ತದೆ ಮುಂದುವರಿದು ಸರ್ಕಾರದ ಎರಡನೇ ಆದೇಶ ಸಂಖ್ಯೆ ವಾಪ್ರಯು 228 ಪ್ರವಾಯೋ 2004, ದಿನಾಂಕ 16–9–2004ರಲ್ಲಿ 30 00 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ ಮೂರನೇ ಹಾಗೂ ಅಂತಿಮ ಕಂತಾಗಿ 40 00 ಲಕ್ಷ ರೂ ಗಳನ್ನು ಸರ್ಕಾರದ ಆದೇಶ ಸಂಖ್ಯೆ ವಾಪ್ರಯು 61 ಪ್ರವಾಯೋ 2006, ದಿನಾಂಕ 22–12–2006ರಲ್ಲಿ ಬಿಡುಗಡೆ ಮಾಡಲಾಗಿದೆ

ಚಿಕ್ಕಮಗಳೂರು ಜಿಲ್ಲೆಯ ಬಗ್ಗೆ ಪ್ರವಾಸಿ ಕಿರುಹೊತ್ತಿಗೆಗಳನ್ನು ಮುದ್ರಿಸಿ ಪ್ರಚಾರ ನೀಡಲಾಗುತ್ತಿದೆ ಹಾಗೂ ಈ ಜಿಲ್ಲೆಯ ಪ್ರವಾಸಿ ಸ್ಥಳಗಳ ಬಗ್ಗೆ ಒಂದು ಕಿರುಚಿತ್ರವನ್ನು ಸಹ ತಯಾರಿಸಲಾಗಿದೆ

ಆ) ಪ್ರಸ್ತುತ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಒದಗಿಸಿರುವ ಒಟ್ಟಾರೆ ಅನುದಾನವು ರೂ 50 50 ಕೋಟಿಗಳಾಗಿದ್ದು, ಜಿಲ್ಲಾವಾರು ಅನುದಾನ ಇರುವುದಿಲ್ಲ

ಇ) ಹೌದು

ಈ) ಚಿಕ್ಕಮಗಳೂರು ಜಿಲ್ಲೆಯ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತವು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಇಲಾಖೆಯು ತೆಗೆದುಕೊಂಡಿರುವ ಕ್ರಮ ಕೆಳಗಿನಂತಿವೆ

1) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು 2006–07ನೇ ಸಾಲಿನಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಚಿಕ್ಕಮಗಳೂರುರವರಿಗೆ 15 00 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ

2) ಚಿಕ್ಕಮಗಳೂರು ಜಿಲ್ಲೆಯ ಕಲ್ಹತ್ತಗಿರಿ ಫಾಲ್ಸ್ ಹಾಗೂ ಹೆಬ್ಬೆ ಫಾಲ್ಸ್‌ಗಳಲ್ಲಿ ಪ್ರವಾಸಿ ಸೌಲಭ್ಯ ನಿರ್ಮಿಸಲು ರೂ 40 00 ಲಕ್ಷ ಅನುದಾನವನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ (ಸರ್ಕಾರದ ಆದೇಶ ಸಂಖ್ಯೆ ವಾಪ್ರಯು 61 ಪ್ರವಾಯೋ 2006, ದಿನಾಂಕ 22–12–2006)

3) ಚಿಕ್ಕಮಗಳೂರು ಜಿಲ್ಲೆಯ ರತ್ನಗಿರಿ ಬೋರೆ ಪ್ರದೇಶದಲ್ಲಿರುವ ಮಹಾತ್ಮ ಗಾಂಧಿ ಉದ್ಯಾನವನದಲ್ಲಿ ಹೆಚ್ಚುವರಿ ಸೌಲಭ್ಯಗಳನ್ನು ಅಭಿವೃದ್ಧಿವಡಿಸಲು ರೂ 40 00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರಿಗೆ ಬಿಡುಗಡೆ ಮಾಡುವ ಪ್ರಸ್ತಾವನೆ ವರಿಶೀಲನೆಯಲ್ಲಿದೆ ಹಾಗೆಯೇ

4) ಚಿಕ್ಕಮಗಳೂರು ಜಿಲ್ಲೆಯ ಮುತ್ತೋಡಿ ಅಭಯಾರಣ್ಯದಲ್ಲಿ ಅರಣ್ಯ ಇಲಾಖೆಗೆ ಸೇರಿದ ನೇಚರ್ ಕ್ಯಾಂಪ್‌ನಲ್ಲಿ ಹೆಚ್ಚುವರಿ ಪ್ರವಾಸಿ ಸೌಲಭ್ಯ ನಿರ್ಮಿಸುವ ಬಗ್ಗೆ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರಿಗೆ 92 92 ಲಕ್ಷ ರೂ ಗಳ ಅನುದಾನವನ್ನು ಕೋರಿ ಸಲ್ಲಿಸಿರುವ ವ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

5) ಚಿಕ್ಕಮಗಳೂರು ಜಿಲ್ಲೆಯ ಅಮೃತೇಶ್ವರ ದೇವಾಲಯದ ಬಳಿ ಹಾಗೂ ಬೆಳವಾಡಿಯಲ್ಲಿ ಪ್ರವಾಸಿಗರಿಗೆ ರೂ 25 14 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ಸೌಲಭ್ಯಗಳನ್ನು ನಿರ್ಮಿಸಲು ಕ್ರಮ ಜರುಗಿಸಲಾಗುತ್ತಿದ್ದು ಕಾಮಗಾರಿ ಪ್ರಾರಂಭವಾಗಿರುತ್ತದೆ

6) 12ನೇ ಹಣಕಾಸು ಆಯೋಗದಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಅಂಗಡಿಯಲ್ಲಿ ಪ್ರವಾಸಿ ಮಾಹಿತಿ ಕೇಂದ್ರ ಸ್ಥಾಪಿಸಲು 40 00 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ ಈ ನಂಬಂಧ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಹಾಗೂ ಯೋಜನೆಯ ಅನುಷ್ಠಾನಕ್ಕಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಸಿ ಟಿ ರವಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಈಗ 2007 ನೇ ಇಸವಿಯಾಗಿದೆ ಅಧಿಕಾರಿಗಳು 2003ನೇ ಇಸವಿಯಲ್ಲಿ ಕೊಟ್ಟಿರುವಂತಹ ಉತ್ತರವನ್ನು ಒದಗಿಸಿದ್ದಾರೆ ಅದರ ನಂತರ ನಾನು ಎರಡು ಬಾರಿ ಸಚಿವರನ್ನು ಜಿಲ್ಲೆಗೆ ಕರೆದುಕೊಂಡು ಹೋಗಿದ್ದೇನೆ ಅವರು ಎರಡು ಬಾರಿಯು ಕೂಡ ಜಿಲ್ಲೆಯ ವ್ರವಾಸೋದ್ಯಮದ ದೃಷ್ಟಿಯಿಂದ ಯಾವ ರೀತಿಯಾಗಿ ಪೂರಕ ವಾತಾವರಣವಿದೆ ಅದನ್ನು ಮನವರಿಕೆ ಮಾಡುವಂತಹ ಕೆಲಸವನ್ನು ಮಾಡಿ, ಜಿಲ್ಲಾಧಿಕಾರಿಗಳಿಂದ ಅವರಿಗೆ ಹೊಸದಾಗಿ ಪ್ರಸ್ತಾವನೆಯನ್ನು ಸಹ ಕಳುಹಿಸಿಕೊಟ್ಟಿದ್ದೇನೆ ಯಾವುದೇ ವ್ರಸ್ತಾವನೆಗಳ ಬಗ್ಗೆ ಇವರು ಉಲ್ಲೇಖವನ್ನು ಮಾಡಿರುವುದಿಲ್ಲ ಇವರು 2003 ನೇ ಇಸವಿಯಲ್ಲಿ

ಬರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆಂಬುದರ ಬಗ್ಗೆ ಹೇಳಿದ್ದಾರೆ ನಮ್ಮ ಜಿಲ್ಲೆಯ ಒಳಗಡೆ Temple Tourismಗೆ ಮತ್ತು ಪ್ರಕೃತಿ ಪ್ರವಾಸೋದ್ಯಮಕ್ಕೆ ಮತ್ತು ಸಾಹಸ ಪ್ರವಾಸೋದ್ಯಮಕ್ಕೆ ವಿಪುಲವಾದ ಅವಕಾಶವಿರುವಂತಹ ದೇವರೇ ಒಂದು ವರವನ್ನು ಕೊಟ್ಟಿರುವಂತಹ ಪ್ರಧಾನವಾದ ಜಿಲ್ಲೆಗೆ ಒಂದು ವಿಫುಲವಾದ ಅವಕಾಶವಿದೆ ಈ ದೃಷ್ಟಿಯಲ್ಲಿ ಮಾನ್ಯ ಸಚಿವರು ಏನು ಯೋಜನೆಯನ್ನು ರೂಪಿಸಿದ್ದಾರೆಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ವಿನಂತಿಸಿಕೊಳ್ಳುತ್ತೇನೆ

ಶ್ರೀ ಬಿ ಶ್ರೀರಾಮುಲು ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯು ನಿಸರ್ಗ ಸಂಪತ್ತನ್ನು ಹೊಂದಿರುವಂತಹ ಜಿಲ್ಲೆಯಾಗಿದೆ ನಮ್ಮ ಮೂಡಿಗೆರೆ ತಾಲ್ಲೂಕಿನ ಅಂಗಡಿಯಲ್ಲಿ ಪ್ರಾರಂಭಿಸಲು, ಧಾರ್ಮಿಕ ಕ್ಷೇತ್ರವಾದ ಶೃಂಗೇರಿ, ಹೊರನಾಡು ಪ್ರಸಿದ್ಧವಾಗಿದೆ ಬಾಬಾಬುಡನ್‌ಗಿರಿ, ಧಾರ್ಮಿಕ ಮತ್ತು ಐತಿಹಾಸಿಕವಾದ ಕೇಂದ್ರವಾಗಿದೆ 2003 ನೇ ಇಸವಿಯಲ್ಲಿ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆಯವರು ಪ್ರವಾಸೋದ್ಯಮವನ್ನು ಅಭಿವೃದ್ಧಿಯನ್ನು ಮಾಡಬೇಕೆಂದು ಒಂದು ಕೋಟಿ ರೂಪಾಯಿಗಳನ್ನು ಕೇಳಿದ್ದರು ಅದರಲ್ಲಿ 2003ರಲ್ಲಿ 30 ಲಕ್ಷ ರೂಪಾಯಿಗಳನ್ನು, 2004ರಲ್ಲಿ 30 ಲಕ್ಷ ರೂಪಾಯಿಗಳನ್ನು, 2006ರಲ್ಲಿ 40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಈ ವರ್ಷ ಜಿಲ್ಲಾಧಿಕಾರಿಗಳಿಗೆ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡುವ ಬಗ್ಗೆ 15 ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದೇವೆ ಅದೇ ರೀತಿಯಾಗಿ ಕಲ್ಲತ್ತಗಿರಿ ಫಾಲ್ಸ್ ಹಾಗೂ ಹೆಬ್ಬೆ ಫಾಲ್ಸ್ ಪ್ರವಾಸಿ ಸೌಲಭ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ 40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಅದೇ ರೀತಿಯಾಗಿ ರತ್ನಗಿರಿ ಬೋರೆಯಲ್ಲಿ ಮಹಾತ್ಮಗಾಂಧಿ ಉದ್ಯಾನವನ್ನು ಅಭಿವೃದ್ಧಿ ಮಾಡಬೇಕೆಂದು 40 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಅದೇ ರೀತಿಯಾಗಿ ಜಿಲ್ಲಾಧಿಕಾರಿಯವರು ನಮ್ಮ Nature Campನ್ನು ಮುತ್ತೋಡಿ ಫಾರೆಸ್ಟ್‌ನ್ನು ಅಭಿವೃದ್ಧಿ ಮಾಡುವುದಕ್ಕೆ 92 92 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಅದೇ ರೀತಿಯಾಗಿ 40 ಲಕ್ಷ ರೂಪಾಯಿಗಳನ್ನು ಪ್ರವಾಸೋದ್ಯಮ ಮಾಹಿತಿ ಕೇಂದ್ರಕ್ಕೆ 40 ಲಕ್ಷ ರೂಪಾಯಿಗಳನ್ನು ಮೂಡಿಗೆರೆ ಮತ್ತು ಅಂಗಡಿಯಲ್ಲಿ ಮಾಹಿತಿ ಕೇಂದ್ರವನ್ನು ನಿರ್ಮಿಸಲು ಹಣವನ್ನು

ಬಿಡುಗಡೆ ಮಾಡಿದೆ ನಮ್ಮ ಇಲಾಖೆಯಿಂದ ಕಟ್ಟಿರುವಂತಹ ವಸತಿ ನಿಲಯವನ್ನು ತಾಜ್ ಹೋಟೆಲ್ ಮತ್ತು ರೆಸಾರ್ಟ್‌ಗಳಿಗೆ ನೀಡಿದ್ದೇವೆ ಶೃಂಗೇರಿಯಲ್ಲಿ ನಾವು ಯಾತ್ರಿ ನಿವಾಸವನ್ನು ಮರಕ್ಕೆ ನೀಡಲಾಗಿದೆ ನಮ್ಮ ಭದ್ರಾ Wildlife ಅಭಿವೃದ್ಧಿ ಮಾಡುವುದಕ್ಕೆ ಕೇಂದ್ರ ಸರ್ಕಾರದ 202 48 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಿದ್ದೇವೆ ಅದರಲ್ಲಿ 161 98 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಇನ್ನು ಕೆಲಸವನ್ನು Jungle Resorts ನವರು ನಿರ್ವಹಿಸುತ್ತಿದ್ದಾರೆ ಅದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ ಟಿ ರವಿಯವರು ನಮ್ಮ wildlife ಅಭಿವೃದ್ಧಿಯ ಬಗ್ಗೆ ಅದೇ ರೀತಿಯಲ್ಲಿ Nature Camp, Home stay, Eco-Tourism, Sports Tourism ಅಭಿವದ್ಧಿಯನ್ನು ಮಾಡಬೇಕೆಂದು ಬಹಳಷ್ಟು ಸಾರಿ ನಾನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಾವ ರೀತಿಯಾಗಿ ಅಭಿವೃದ್ಧಿಯನ್ನು ಮಾಡಬೇಕೆಂದು ಹೇಳಿ, ನಮ್ಮ ಜಿಲ್ಲೆಯಲ್ಲಿ ಎಲ್ಲಾ ರೀತಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಯನ್ನು ಮಾಡಬೇಕೆಂಬ ಪ್ರಯತ್ನವನ್ನು ನಡೆಸಿದ್ದೇವೆ ಈ ಬಾರಿ ನಮ್ಮ ಶಾಸಕರು ಏನು ಚಿಕ್ಕಮಗಳೂರು ಜಿಲ್ಲೆಯಲ್ಲಿ 5 ಕೋಟಿ ರೂಪಾಯಿಗಳ ಹಣವನ್ನು ಪ್ರವಾಸೋದ್ಯಮಕ್ಕೆ ಕೇಳಿದ್ದಾರೋ ಅದು ಪರಿಶೀಲನೆಯಲ್ಲಿ ಇದೆ ಆದಷ್ಟು ಬೇಗನೇ ಆ ಚಿಕ್ಕಮಗಳೂರು ಜಿಲ್ಲೆಗೆ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಯತ್ನವನ್ನು ಮಾಡುತ್ತೇವೆ

ಶ್ರೀ ಸಿ ಟಿ ರವಿ. ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ ಆದರೆ ಈ ಬಾರಿ ಪ್ರವಾಸೋದ್ಯಮ ಇಲಾಖೆಗೆ ಅನುದಾನ 50 50 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದರಲ್ಲಿ ನಮ್ಮ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಲಿಲ್ಲ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಮೀಕ್ಷೆಯನ್ನು ಮಾಡಿದ್ದಾರೆಂದು ಹೇಳಿದ್ದಾರೆ ಆ ಸಮೀಕ್ಷೆಯಲ್ಲಿ ಯಾವ ಯಾವ ರೀತಿಯಾದ ಮೂರಕವಾದ ಅಂಶಗಳು ಇವೆ ಸಮೀಕ್ಷೆಯ ವರದಿ ಏನು? ಅದರ ಬಗ್ಗೆ ಹೇಳಬೇಕು ಮತ್ತು ಈ ಬಾರಿಯ ಅನುದಾನದಲ್ಲಿ 50 50 ಕೋಟಿ ರೂಪಾಯಿಗಳಲ್ಲಿ ಎಷ್ಟು ಅನುದಾನವನ್ನು ಜಿಲ್ಲೆಗೆ ಕೊಡುತ್ತಾರೆ

ಶ್ರೀ ಬಿ ಶ್ರೀರಾಮುಲು ಪ್ರವಾಸೋದ್ಯಮ ಇಲಾಖೆಗೆ ಸುಮಾರಾಗಿ 60 ಕೋಟಿ ರೂಪಾಯಿಗಳ ಬಜೆಟ್ ಇದೆ ಈ ಬಾರಿ ನಮ್ಮ ಅಧಿಕಾರಿಗಳಾದ Principal Secretary, Commissioner ಗಳು ಕರ್ನಾಟಕ ರಾಜ್ಯದಲ್ಲಿ ಉದ್ದಗಲಕ್ಕೂ ತಿರುಗಿ ಪ್ರವಾಸೋದ್ಯಮವನ್ನು ಯಾವ ರೀತಿಯಾಗಿ ಅಭಿವೃದ್ಧಿಯನ್ನು ಮಾಡಬೇಕೆಂಬುದರ ಬಗ್ಗೆ ಪ್ರಯತ್ನವನ್ನು ನಡೆಸುತ್ತಿದ್ದಾರೆ ಯಾವ ರೀತಿಯಾಗಿ ನಾವು ಇವತ್ತು ಪ್ರಕೃತಿ ಸಂಪತ್ತು ಹೊಂದಿರುವಂತಹ ಈ ಚಿಕ್ಕಮಗಳೂರು ಜಿಲ್ಲೆಗೆ ಮತ್ತು ಮುಂದಿನ ದಿನಗಳಲ್ಲಿ ಪ್ರವಾಸಿಗರನ್ನು ಪ್ರವಾಸೋದ್ಯಮಕ್ಕೆ ಆಕರ್ಷಣೆ ಮಾಡುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿ ಟಿ ರವಿಯವರು ನಮ್ಮ ಜಿಲ್ಲೆಗೆ ಎಷ್ಟು ಪ್ರಾಮುಖ್ಯತೆಯನ್ನು ಕೋಡುತ್ತೀರೆಂದು ಕೇಳಿದ್ದಾರೆ, ಸುಮಾರಾಗಿ ಅವರು ಚಿಕ್ಕಮಗಳೂರು ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಜಿಲ್ಲಾಧಿಕಾರಿಗಳಿಂದ 5 ಕೋಟಿ ರೂಪಾಯಿಗಳ ಬೇಡಿಕೆಯನ್ನು ಕೊಟ್ಟಿದ್ದಾರೆ ಮುಂದೆ ಬರುವಂತಹ ದಿನಗಳಲ್ಲಿ ಆದಷ್ಟು ಬೇಗನೇ ಪ್ರಮುಖವಾಗಿ ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸಿಗರನ್ನು ಆಕರ್ಷಣೆ ಮಾಡುವ ದೃಷ್ಟಿಯಿಂದ ಸುಮಾರಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಿ ಆದಷ್ಟು ಬೇಗನೆ ಹೆಚ್ಚಿನ ಅದ್ಯತೆಯನ್ನು ಕೊಡುತ್ತೇನೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಕೊಡುತ್ತಿದ್ದೇನೆ

ಶ್ರೀ ಸಿ ಟಿ ರವಿ ಈ ಪ್ರವಾಸೋದ್ಯಮ ಇಲಾಖೆ ಮತ್ತು PWD ಇಲಾಖೆ ಜಂಟಿಯಾಗಿ ಯೋಜನೆಯನ್ನು ರೂಪಿಸಬೇಕಾಗಿದೆ ಕೆಮ್ಮಣ್ಣುಗುಂಡಿ ಮತ್ತು ಭದ್ರಾ ಅಭಯಾರಣ್ಯ ನಡುವೆ Distance ಇರುವುದು ಕೇವಲ 25 ಕಿ ಮಿ ಆದರೆ ಕೆಮ್ಮಣ್ಣುಗುಂಡಿಗೆ ಬಂದವರು ಭದ್ರಾ ಅಭಯಾರಣ್ಯಕ್ಕೆ ಹೋಗುವುದೇ ದುಸ್ಸಾಹಸದ ಕೆಲಸವಾಗಿದೆ ಏಕೆಂದರೆ ಅಲ್ಲಿಯ ಪರಿಸ್ಥಿತಿ ಹೇಗಿದೆ ಎಂದರೆ, ಆ ರಸ್ತೆಯಲ್ಲಿ ಒಂದು ಸಾರಿ ಹೋದವರನ್ನು ಪುನ ವಾಪಸ್ಸು ಬರುವುದೇ ಕಷ್ಟವೆನ್ನುವಂತಹ ಸ್ಥಿತಿಯಲ್ಲಿ ಆ ರಸ್ತೆಗಳು ಇವೆ ಆದರೆ ಕೆಮ್ಮಣ್ಣುಗುಂಡಿಗೆ ಬಂದಂತಹ ಜನರು ಭದ್ರಾ ಅಭಯಾರಣ್ಯಕ್ಕೆ ಬರುವುದಿಲ್ಲ ಭದ್ರಾ ಅಭಯಾರಣ್ಯಕ್ಕೆ ಬಂದಂತಹ ಜನರು ಕುದುರೆಮುಖ National Parkಗೆ ಹೋಗುವುದು ಕನಸಿನ ಮಾತೇ ಆಯಿತು ಈ ರೀತಿಯಾಗಿ ರಸ್ತೆಯ ಸ್ಥಿತಿ ಇದೆ ಹೀಗಾಗಿ ಪ್ರವಾಸೋದ್ಯಮ ಇಲಾಖೆ ಮತ್ತು PWD ಇಲಾಖೆ ಒಟ್ಟಿಗೆ ಕುಳಿತು ಜಂಟಿಯಾಗಿ ಪ್ರವಾಸೋದ್ಯಮ ಸ್ಥಳಗಳ ಬಗ್ಗೆ ಅಭಿವೃದ್ಧಿಯನ್ನು

P2
8

ಪಡಿಸುವ ಹಿನ್ನೆಲೆಯೊಳಗಡೆ ಯೋಜನೆಯನ್ನು ರೂಪಿಸಿದರೆ ಏನು ನಾವು ಕೇರಳ ಮತ್ತು ಕರ್ನಾಟಕ, ಕೇರಳ ಮತ್ತು ತಮಿಳುನಾಡು, ನಮ್ಮ ಅಕ್ಕಪಕ್ಕದಲ್ಲಿರುವಂತಹ ರಾಜ್ಯಗಳಾಗಿವೆ ಅವು ಪ್ರವಾಸೋದ್ಯಮವನ್ನೆ ಹೇಗೆ major income ಆಗಿ ಪರಿವರ್ತನೆಯನ್ನು ಮಾಡಿಕೊಂಡಿದೆ, ಹೇಗೆ ದೇಶವಿದೇಶಗಳಿಂದ ಪ್ರವಾಸಿಗರನ್ನು ಸೆಳೆಯುತ್ತಿದ್ದಾರೋ ಆ ರೀತಿಯಾಗಿ ಮಾಡಿದರೆ ನಾವು ಪ್ರವಾಸಿಗರನ್ನು ಸೆಳೆಯುವುದಕ್ಕೆ ಸಾಧ್ಯವಾಗುತ್ತದೆ ನಾವು ಅವರನ್ನು ಹೋಲಿಸಿಕೊಂಡು ನೋಡಿದರೆ ನಾವು ಅವರ 5% ಇಲ್ಲ ಈ ದೃಷ್ಟಿಯೊಳಗಡೆ ಏನಾದರೂ ಮಾಡಿ ಪ್ರವಾಸೋದ್ಯಮ ಇಲಾಖೆ ಈ ಲೋಕೋಪಯೋಗಿ ಇಲಾಖೆಯ ಜೊತೆಯಲ್ಲಿ ಚರ್ಚೆಯನ್ನು ನಡೆಸಿದೆಯಾ? ಸಮೀಕ್ಷೆಯನ್ನು ನಡೆಸಿದೆಯಾ? ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಏನು ಮಾಡಿದ್ದೀರೆಂದು ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಬಿ ಶ್ರೀರಾಮುಲು ಇಡೀ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಬೆಳೆಸಬೇಕೆಂದು ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿ ಟಿ ರವಿಯವರು ನಮ್ಮ ರೋಡ್ಸ್ ಮತ್ತು ಲೋಕೋಪಯೋಗಿ ಇಲಾಖೆಯ ಬಗ್ಗೆ ಏನು ಕೇಳಿದ್ದಾರೋ already ನಾವು ಪ್ರವಾಸೋದ್ಯಮದಿಂದ ಸುಮಾರಾಗಿ ರೋಡ್ಸ್‌ನ್ನು ಅಭಿವೃದ್ಧಿ ಮಾಡುತ್ತಿದ್ದೇವೆ ಪ್ರವಾಸೋದ್ಯಮವು ಬೆಳೆಯುವ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆಗೆ 50 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ ಆ ಪ್ರಸ್ತಾವನೆಗೆ ಉತ್ತರವು ಸಿಕ್ಕಿರುವುದಿಲ್ಲ ಆದಷ್ಟು ಬೇಗನೆ ಪ್ರವಾಸೋದ್ಯಮದ ದೃಷ್ಟಿಯಿಂದ ಯಾವ ರೀತಿಯಾಗಿ ರೋಡ್‌ಗಳು ಆಗಬೇಕೆಂದು ನಾವು ಒಂದು ಚಿಂತನೆಯನ್ನು ಮಾಡಿ, ಆದಷ್ಟು ಬೇಗನೇ ಈ ಲೋಕೋಪಯೋಗಿ ಇಲಾಖೆಯಿಂದ ಹಣವನ್ನು ಬಿಡುಗಡೆ ಮಾಡಿಸುವುದರಲ್ಲಿ ಎಲ್ಲಾ ರೀತಿಯಿಂದ ಅಭಿವೃದ್ಧಿಯನ್ನು ಮಾಡುತ್ತೇವೆಂದು ಮಾನ್ಯ ಸಭಾಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ

ಅಧ್ಯಕ್ಷರು ಶ್ರೀ ಬಸವರಾಜ್ ಭೀಮಪ್ಪ ಹಿಟ್ನಾಳ್ ಮತ್ತು ಶ್ರೀ ಬಸವರಾಜ್ ರಾಯರೆಡ್ಡಿ ಇವರ (161) ಪ್ರಶ್ನೆಗೆ 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ